# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರು ರವರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು-560 002


ಸಂ:ವಿಆ(ಪ)/ಪಿಆರ್/ 77 /2021-22 ದಿನಾಂಕ: 14-06-2021

## ಕಛೇರಿ ಆದೇಶ

ವಿಷಯ : ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2021-22ನೇ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸಿದ ಅನುದಾನವನ್ನು ವಲಯವಾರು ಹಂಚಿಕೆ ಮಾಡುವ ಬಗ್ಗೆ.

ಉಲ್ಲೇಖ : 1. 2021-22ನೇ ಸಾಲಿನ ಆಯವ್ಯಯ ಅಂದಾಜುಗಳಿಗೆ ಅನುಮೋದನೆ ನೀಡಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಕೌನ್ಸಿಲ್ ಸಭೆಯ ವಿಷಯ ಸಂ:954/2020-21, ದಿನಾಂಕ:27-3-2021 ಮತ್ತು ವಿಷಯ ಸಂಖ್ಯೆ 971/2020-21 ದಿನಾಂಕ 7-4-2021.

2. ಸರ್ಕಾರದ ಅನುಮೋದನೆಗೆ ಸಲ್ಲಿಸಿರುವ ಆಯುಕ್ತರ ಕಛೇರಿ ಪತ್ರ ಸಂಖ್ಯೆ ಮುಲೆಆ/ ಆಯವ್ಯಯ-2021-22/ಪಿಆರ್/07/ 2021-22 ದಿನಾಂಕ 25-05-2021

*****

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಪ್ರತ್ಯೇಕವಾಗಿ ಬಿ.ಬಿ.ಎಂ.ಪಿ-2020 ಕಾಯಿದೆಯು ಜಾರಿಗೆ ಬಂದಿದ್ದು, ಅದರಂತೆ ಹಾಲಿ ಇರುವ ವಲಯಗಳನ್ನು ಆಡಳಿತಾತ್ಮಕವಾಗಿ ಮತ್ತು ಆರ್ಥಿಕವಾಗಿ ಅಧಿಕಾರ ವಿಕೇಂದ್ರೀಕರಣಗೊಳಿಸುವ ದೃಷ್ಟಿಯಿಂದ ಬಿ.ಬಿ.ಎಂ.ಪಿ.ಕಾಯಿದೆ 2020ರ ಅಧ್ಯಾಯ 5 ರಲ್ಲಿ ಪ್ರಕರಣ 78 ರಲ್ಲಿ ವಲಯ ಸಮಿತಿಗೆ ವಿಧಿಸಿರುವ ಪ್ರಕಾರ್ಯಗಳನ್ನು ನಿರ್ವಹಿಸಲು ಅನುವಾಗುವಂತೆ, ಪ್ರಕರಣ 79 (1) ವಲಯ ಸಮಿತಿಯು 78ನೇ ಪ್ರಕರಣದ ಅಡಿಯಲ್ಲಿ ನಮೂದಿಸಲಾದ ತನ್ನ ಪ್ರಕಾರ್ಯಗಳನ್ನು ಕೈಗೊಳ್ಳುವುದಕ್ಕಾಗಿ, ವಾರ್ಡ್ ಸಮಿತಿಗಳಿಗೆ ನಿರ್ಧಿಷ್ಟ ವಲಯಕ್ಕಾಗಿ ಮೀಸಲಿರಿಸಿದ ಆಯವ್ಯಯದ ಪೈಕಿ ಅಂತಹ ಮೊತ್ತವನ್ನು ಹಂಚಿಕೆ ಮಾಡತಕ್ಕದ್ದು ಎಂದು ನಿರ್ಧಿಷ್ಟಪಡಿಸಲಾಗಿರುತ್ತದೆ.

ಉಲ್ಲೇಖ (1) ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2021-22ನೇ ಸಾಲಿನ ಕರಡು ಆಯವ್ಯಯವನ್ನು ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಕೌನ್ಸಿಲ್ ಸಭೆಯು ಅನುಮೋದನೆ ನೀಡಿರುತ್ತದೆ. ಉಲ್ಲೇಖ (2) ರಲ್ಲಿ ಘನ ಸರ್ಕಾರದ ಅನುಮೋದನೆಗಾಗಿ ಕರಡು ಆಯವ್ಯಯವನ್ನು ಸಲ್ಲಿಸಲಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2021-22ನೇ ಸಾಲಿನಲ್ಲಿ ಆಯವ್ಯಯ ಭಾಷಣದಲ್ಲಿ ಈ ನಿಟ್ಟಿನಲ್ಲಿ ಈ ಕೆಳಕಂಡಂತೆ ಘೋಷಣೆ ಮಾಡಲಾಗಿರುತ್ತದೆ.

"ವಾರ್ಡ್ ಮತ್ತು ವಲಯ ಮಟ್ಟದಲ್ಲಿ ಆರ್ಥಿಕ ನಿರ್ವಹಣೆ ಮತ್ತು ಹೊಣೆಗಾರಿಕೆಯನ್ನು ವಿಕೇಂದ್ರೀಕರಣಗೊಳಿಸುವುದಾಗಿ ಘೋಷಿಸಲಾಗಿದೆ. ಅಧಿಕಾರ ವಿಕೇಂದ್ರೀಕರಣದ ಮೂಲ ಉದ್ದೇಶದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾಯಿದೆಯು ಪ್ರದೇಶ ಸಮಿತಿ, ವಾರ್ಡ್ ಸಮಿತಿ, ವಿಧಾನಸಭಾ ಕ್ಷೇತ್ರದ ಸಮಾಲೋಚನಾ ಸಮಿತಿ ಮತ್ತು ವಲಯ ಸಮಿತಿಯನ್ನು ಹೊಂದಿರುತ್ತದೆ. ಮೊದಲ ಬಾರಿಗೆ ಪಾಲಿಕೆಯು ಒದಗಿಸುವ ನಾಗರೀಕ ಸೇವೆಗಳ ನಿರ್ವಹಣೆಗಳ ತೀರ್ಮಾನವನ್ನು ವಲಯ ಮಟ್ಟದಲ್ಲೇ ನಿರ್ಧರಿಸಲಾಗುತ್ತದೆ.

ಮು.ತಿ.ನೋ.

ಅಲ್ಲದೆ, ಅಂದಾಜು ರೂ.2.000.00 ಕೋಟಿ ಸಂಪನ್ಮೂಲಗಳ ಹಂಚಿಕೆಯ ಆಡಳಿತಾತ್ಮಕ ನಿರ್ಧಾರಗಳನ್ನು ವಲಯ ಮಟ್ಟದಲ್ಲಿಯೇ ಕೈಗೊಳ್ಳಲು ಆರ್ಥಿಕ ಅಧಿಕಾರವನ್ನು ನೀಡಲಾಗುವುದು. ಇದು ಕ್ರಾಂತಿಕಾರಕ ಬದಲಾವಣೆಯಾಗಲಿದೆ. ಇದರ ಪರಿಣಾಮ ನಾಗರಿಕರು ಬಯಸಿದ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ ವಲಯಮಟ್ಟದಲ್ಲಿಯೇ ಪಾವತಿಯಾಗುವಲ್ಲಿ ನಾಗರಿಕರು ಕೈಗೊಳ್ಳುವ ನಿರ್ಧಾರವು ಪರಿಣಾಮಕಾರಿಯಾಗಿರುತ್ತದೆ.

ನಗರದ ನಾಗರಿಕರ ಸಕ್ರಿಯ ಪಾಲ್ಗೊಳ್ಳುವಿಕೆಯೊಂದಿಗೆ, ಮುಂದಿನ ಕೆಲವು ವರ್ಷಗಳಲ್ಲಿ ಪಾಲಿಕೆಯ ಆಯವ್ಯಯದ ಕನಿಷ್ಠ 50%ರಷ್ಟು ಅನುದಾನವನ್ನು ವಲಯ ಮಟ್ಟದಲ್ಲಿ ವಿನಿಯೋಗಿಸಲು ಹಂಚಿಕೆ ಮಾಡುವುದು ನಮ್ಮ ಧ್ಯೇಯವಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಸುಮಾರು ರೂ.2000 ಕೋಟಿ ಅನುದಾನವನ್ನು ವಲಯಗಳಿಗೆ ಹಂಚಿಕೆ ಮಾಡುವ ಮೂಲಕ ಪ್ರಾರಂಭಿಸುತ್ತಿದ್ದೇವೆ. ಈ ಆರಂಭವು ಪಾಲಿಕೆಯ ಕಾರ್ಯನಿರ್ವಹಣೆಯಲ್ಲಿ ಕ್ರಾಂತಿಕಾರಕ ಬದಲಾವಣೆಗೆ ನಾಂದಿಯಾಗಿರುತ್ತದೆ. ಅತಿ ಹೆಚ್ಚು ವಿದ್ಯಾವಂತ ನಾಗರೀಕರನ್ನು ಹೊಂದಿರುವ ಬೆಂಗಳೂರು ನಗರವು, ಜಾಗತಿಕ ತಂತ್ರಜ್ಞಾನದ ಕೇಂದ್ರ ಆಗಿದ್ದು, ನಾಗರೀಕ ಸೇವೆ ಮತ್ತು ಮಾಹಿತಿಗಳನ್ನು ಒದಗಿಸಲು ಒಂದೇ ವೇದಿಕೆಯಾಗಿ ಕಾರ್ಯನಿರ್ವಹಿಸಲು ಏಕೀಕೃತ ಡಿಜಿಟಲ್ ಪ್ಲಾಟ್‌ಫಾರ್ಮ್‌ನ್ನು ಸಿದ್ಧಪಡಿಸಲಾಗುತ್ತಿದೆ."

**ಪಾಲಿಕೆಯ 2021-22ನೇ ಸಾಲಿನ ಆಯವ್ಯಯ ಪುನರ್ ರಚನೆ :**

2021-22 ನೇ ಸಾಲಿನ ಪಾಲಿಕೆಯ ಅಯವ್ಯಯವನ್ನು ನ್ಯಾಷನಲ್ ಮುನಿಸಿಪಲ್ ಅಕೌಂಟಿಂಗ್ ಮ್ಯಾನುಯಲ್ ಅನುಸಾರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಲೆಕ್ಕಪತ್ರ ನಿರ್ವಹಣೆ ಮತ್ತು ಬಜೆಟ್ ನಿರ್ವಹಣಾ ನಿಯಮಗಳು-2020 ಕರಡು ನಿಯಮಾವಳಿಗಳ ಆಧಾರದ ಮೇಲೆ ಪುನರ್ ರಚಿಸಲಾಗಿದೆ.

ಅಯವ್ಯಯದ ಲೆಕ್ಕಶೀರ್ಷಿಕೆಗಳನ್ನು ಚಟುವಟಿಕೆ/ಇಲಾಖೆಯ ಸಂಖ್ಯೆ ಮತ್ತು ಲೆಕ್ಕಶೀರ್ಷಿಕೆಯ ಸಂಯೋಜನೆಯೊಂದಿಗೆ ತಯಾರಿಸಲಾಗಿದ್ದು, ಒಟ್ಟು ಎಂಟು ಸಂಖ್ಯೆಗಳಿಂದ ಕೂಡಿರುತ್ತದೆ, ಮೊದಲ "ಎರಡು" ಸಂಖ್ಯೆಗಳು ಚಟುವಟಿಕೆ/ಇಲಾಖೆಯ ಸಂಖ್ಯೆಯನ್ನು ಸೂಚಿಸುತ್ತದೆ. ಮತ್ತು ನಂತರದ ಆರು ಸಂಖ್ಯೆಗಳು ಲೆಕ್ಕ ಶೀರ್ಷಿಕೆಯನ್ನು ಸೂಚಿಸುತ್ತದೆ. ಈ ಆರು ಲೆಕ್ಕ ಶೀರ್ಷಿಕೆ ಸಂಖ್ಯೆಗಳು "ಎರಡು" ಪ್ರಧಾನ ಲೆಕ್ಕಶೀರ್ಷಿಕೆ, "ಎರಡು" ಉಪ ಪ್ರಧಾನ ಲೆಕ್ಕಶೀರ್ಷಿಕೆ ಮತ್ತು "ಎರಡು" ಉಪ ಲೆಕ್ಕಶೀರ್ಷಿಕೆಗಳ ಸಂಯೋಜನೆಯಾಗಿರುತ್ತದೆ.

2021-22 ನೇ ಸಾಲಿನ ಆಯವ್ಯಯವನ್ನು ಒಟ್ಟು 12 ಚಟುವಟಿಕೆ/ಇಲಾಖೆಗಳಿಗೆ 01-ಕೌನ್ಸಿಲ್, 02-ಸಾಮಾನ್ಯ ಆಡಳಿತ, 03-ಕಂದಾಯ, 04-ನಗರ ಯೋಜನೆ & ನಿಯಂತ್ರಣ, 05-ಸಾರ್ವಜನಿಕ ಕಾಮಗಾರಿಗಳು, 06-ಘನತ್ಯಾಜ್ಯ ನಿರ್ವಹಣೆ, 07-ಸಾರ್ವಜನಿಕ ಆರೋಗ್ಯ ಸಾಮಾನ್ಯ, 08-ಸಾರ್ವಜನಿಕ ಆರೋಗ್ಯ ವೈದ್ಯಕೀಯ, 09-ತೋಟಗಾರಿಕೆ, 10-ನಗರ ಅರಣ್ಯೀಕರಣ, 11-ಸಾರ್ವಜನಿಕ ಶಿಕ್ಷಣ ಮತ್ತು 12-ಸಮಾಜ ಕಲ್ಯಾಣ, ಎಂದು ಮರುವಿಂಗಡಿಸಿ, 01 ರಿಂದ 12 ರ ವರಗೆ ಸಂಕೇತಗಳನ್ನು ನೀಡಲಾಗಿರುತ್ತದೆ. ಅದೇ ರೀತಿ ಪಾಲಿಕೆಯ ಲೆಕ್ಕಶೀರ್ಷಿಕೆಗಳನ್ನು, ಆದಾಯ, ವೆಚ್ಚಗಳು, ಹೊಣೆಗಾರಿಕೆ ಮತ್ತು ಬಂಡವಾಳ ಲೆಕ್ಕಶೀರ್ಷಿಕೆಗಳಾಗಿ ಮರುವಿಂಗಡಿಸಿ, ಕ್ರಮವಾಗಿ ಆದಾಯ-1, ವೆಚ್ಚಗಳು-2. ಹೊಣೆಗಾರಿಕೆ-3, ಮತ್ತು ಬಂಡವಾಳ-4 ಗಳಾಗಿ ಸಂಕೇತಗಳನ್ನು ನೀಡಲಾಗಿರುತ್ತದೆ.

ಮು.ತಿ.ನೋ.

ಪ್ರಧಾನ ಲೆಕ್ಕಶೀರ್ಷಿಕೆ ವೆಚ್ಚಗಳು-20 ರಿಂದ ಪ್ರಾರಂಭವಾಗುವ ಲೆಕ್ಕಶೀರ್ಷಿಕೆ ಅಡಿಯಲ್ಲಿ ಮೀಸಲಿರಿಸಿದ ಅನುದಾನದಲ್ಲಿ ನಿರ್ವಹಣೆ ಕಾಮಗಾರಿಗಳನ್ನು ಮತ್ತು ಪ್ರಧಾನ ಲೆಕ್ಕಶೀರ್ಷಿಕೆ ಬಂಡವಾಳ-40 ರಿಂದ ಪ್ರಾರಂಭವಾಗುವ ಲೆಕ್ಕಶೀರ್ಷಿಕೆ ಅಡಿಯಲ್ಲಿ ಬಂಡವಾಳ ಕಾಮಗಾರಿಗಳನ್ನು ಮಾತ್ರ ಕೈಗೊಳ್ಳುವುದು.

ಪ್ರಧಾನ ಲೆಕ್ಕಶೀರ್ಷಿಕೆ ವೆಚ್ಚಗಳು-20 ರಿಂದ ಪ್ರಾರಂಭವಾಗುವ ಲೆಕ್ಕಶೀರ್ಷಿಕೆ ಅಡಿಯಲ್ಲಿ ಮೀಸಲಿರಿಸಿದ ಅನುದಾನದಲ್ಲಿ ಬಂಡವಾಳ ಕಾಮಗಾರಿಗಳನ್ನು ಮತ್ತು ಪ್ರಧಾನ ಲೆಕ್ಕಶೀರ್ಷಿಕೆ ಬಂಡವಾಳ-40 ರಿಂದ ಪ್ರಾರಂಭವಾಗುವ ಲೆಕ್ಕಶೀರ್ಷಿಕೆ ಅಡಿ ಮೀಸಲಿರಿಸಿದ ಅನುದಾನದಲ್ಲಿ ನಿರ್ವಹಣೆ ಕಾಮಗಾರಿಗಳನ್ನು ಕೈಗೊಳ್ಳಲು ಸಂಪೂರ್ಣವಾಗಿ ನಿರ್ಬಂಧಿಸಲಾಗಿದೆ.

**ಐ.ಎಫ್.ಎಂ.ಎಸ್. ತಂತ್ರಾಂಶದಲ್ಲಿ ಪಾವತಿ ಮಾಡಲು ಅನುವಾಗುವಂತೆ ಲೆಕ್ಕಶೀರ್ಷಿಕೆಗಳ ವರ್ಗೀಕರಣ :**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ವೆಚ್ಚಗಳನ್ನು ಭರಿಸಿ, ನಿಯಂತ್ರಿಸಲು ಐ.ಎಫ್.ಎಂ.ಎಸ್. ತಂತ್ರಾಂಶವನ್ನು ಬಳಕೆ ಮಾಡುತ್ತಿದ್ದು, ಅದಕ್ಕೆ ಅನುಗುಣವಾಗಿ 2021-22ನೇ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸಿರುವ ಲೆಕ್ಕಶೀರ್ಷಿಕೆಗಳನ್ನು (1) HRMS Module ಮೂಲಕ ಪಾವತಿ ಮಾಡುವ ಲೆಕ್ಕಶೀರ್ಷಿಕೆಗಳಾದ ವೇತನ ಮತ್ತು ಭತ್ಯೆಗಳ ಅನುದಾನದ ಲೆಕ್ಕಶೀರ್ಷಿಕೆಗಳು, (2) D.C.Bill Module ಮತ್ತು Welfare Module ಮೂಲಕ ಪಾವತಿಯಾಗುವ ಆಡಳಿತಾತ್ಮಕ, ಇತರೆ ಕಾರ್ಯಕ್ರಮಗಳು ಮತ್ತು ನಿರ್ವಹಣೆ ಅನುದಾನದ ಲೆಕ್ಕಶೀರ್ಷಿಕೆಗಳು ಮತ್ತು (3) Work Bill Module ಮೂಲಕ ಜಾಬ್ ಸಂಖ್ಯೆ ಪಡೆದು ಸಿವಿಲ್ / ಎಲೆಕ್ಟ್ರಿಕಲ್ ಅಭಿವೃದ್ಧಿ ಕಾಮಗಾರಿಗಳು ಮತ್ತು ನಿರ್ವಹಣೆ ಕಾಮಗಾರಿಗಳ ಲೆಕ್ಕಶೀರ್ಷಿಕೆಗಳಾಗಿ ವರ್ಗೀಕರಿಸಲಾಗಿದೆ.

ಆದ್ದರಿಂದ, ಡಿ.ಸಿ.ಬಿಲ್ ಮೂಲಕ ಪಾವತಿಸುವ ಅನುದಾನದ ಲೆಕ್ಕಶೀರ್ಷಿಕೆಗಳಲ್ಲಿ ಕಾಮಗಾರಿ ಬಿಲ್ಲುಗಳನ್ನು ಮತ್ತು ಅಭಿವೃದ್ಧಿ ಕಾಮಗಾರಿಗಳಿಗೆ ಮೀಸಲಿರಿಸಿದ ಅನುದಾನದ ಲೆಕ್ಕಶೀರ್ಷಿಕೆಗಳಲ್ಲಿ ಡಿ.ಸಿ.ಬಿಲ್ಲುಗಳನ್ನು ಸೆಳೆಯಲು ಐ.ಎಫ್.ಎಂ.ಎಸ್. ತಂತ್ರಾಂಶದಲ್ಲಿ ಸಾಧ್ಯವಾಗದಂತೆ ಐ.ಎಫ್.ಎಂ.ಎಸ್. ತಂತ್ರಾಂಶವನ್ನು ಮರುವಿನ್ಯಾಸಗೊಳಿಸಲಾಗಿದೆ.

2021-22ನೇ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸಿದ ಅನುದಾನವನ್ನು ಲೆಕ್ಕಶೀರ್ಷಿಕೆವಾರು ವಲಯಗಳಿಗೆ ಮರುಹಂಚಿಕೆ ಮಾಡಲಾಗಿದ್ದು, ಸದರಿ ಹಂಚಿಕೆಯ ಮಿತಿಯಲ್ಲಿ ಮಾತ್ರ ಆಯಾ ವಲಯದ ಅಡಿ ಬರುವ ಬಟವಾಡೆ ಅಧಿಕಾರಿಗಳು ಡಿ.ಸಿ.ಬಿಲ್ಲುಗಳನ್ನು ಸಲ್ಲಿಸಲು ಮಾತ್ರ ಅನುವಾಗುವಂತೆ ಐ.ಎಫ್.ಎಂ.ಎಸ್. ತಂತ್ರಾಂಶದಲ್ಲಿ ನಿಯಂತ್ರಣ ವ್ಯವಸ್ಥೆಯನ್ನು ಅಳವಡಿಸಲಾಗಿರುತ್ತದೆ

2021-22ನೇ ಸಾಲಿನ ಹಿಂದಿನ ಸಾಲುಗಳಲ್ಲಿ ಆಯವ್ಯಯದಲ್ಲಿ ವಿಶೇಷ ಅಭಿವೃದ್ಧಿ ಕಾಮಗಾರಿಗಳಿಗೆ ಮೀಸಲಿರಿಸಿದ ಅನುದಾನ ಮತ್ತು ಅಭಿವೃದ್ಧಿ ಕಾಮಗಾರಿಗಳಿಗೆ ಮೀಸಲಿರಿಸಿದ ಅನುದಾನದ ಲೆಕ್ಕಶೀರ್ಷಿಕೆಗಳಡಿಯಲ್ಲಿ ನಿರ್ವಹಣೆ ಕಾಮಗಾರಿಗಳನ್ನು ಮತ್ತು ಕಲ್ಯಾಣ ಕಾರ್ಯಕ್ರಮಗಳನ್ನು (ಒಂಟಿ ಮನೆ ಮತ್ತು ಸಿ.ಸಿ. ಕ್ಯಾಮರಾ ಅಳವಡಿಸುವುದು, ಇತ್ಯಾದಿ) ಕೈಗೊಳ್ಳಲಾದ ಬಿಲ್ಲುಗಳ ಪಾವತಿಗೆ ಸಂಬಂಧಿಸಿದಂತೆ ಪ್ರಸ್ತುತ ವರ್ಷದಲ್ಲಿ ಅಭಿವೃದ್ಧಿ ಕಾಮಗಾರಿಗಳ ಲೆಕ್ಕಶೀರ್ಷಿಕೆ ಅಡಿಯಲ್ಲಿ ಅಭಿವೃದ್ಧಿ ಕಾಮಗಾರಿಗಳ ಬಿಲ್ಲುಗಳನ್ನು ಮಾತ್ರ ಪಾವತಿಗೆ ಸಲ್ಲಿಸಲು ಅವಕಾಶವಿರುತ್ತದೆ.

ಮು.ತಿ.ನೋ.

ನಿರ್ವಹಣೆ ಮತ್ತು ಕಲ್ಯಾಣ ಕಾರ್ಯಕ್ರಮಗಳ ಬಿಲ್ಲುಗಳನ್ನು ಸಲ್ಲಿಸಲು ತಂತ್ರಾಂಶದಲ್ಲಿ ಅವಕಾಶವಿಲ್ಲದೇ ಇರುವುದರಿಂದ ಅಂತಹ ಪ್ರಕರಣಗಳಲ್ಲಿ ನಿರ್ವಹಣೆ ಮತ್ತು ಕಲ್ಯಾಣ ಕಾರ್ಯಕ್ರಮಗಳಿಗೆ ಮೀಸಲಿಟ್ಟ ಅನುದಾನದ ಲೆಕ್ಕಶೀರ್ಷಿಕೆ ಅಡಿಯಲ್ಲಿಯೇ ಬಿಲ್ಲುಗಳನ್ನು ಸಲ್ಲಿಸುವುದು ಹಾಗೂ ಸದರಿ ನಿರ್ವಹಣೆ ಮತ್ತು ಕಲ್ಯಾಣ ಕಾರ್ಯಕ್ರಮಗಳಿಗೆ ಜಾಬ್ ಸಂಖ್ಯೆ ಪಡೆದಿದ್ದ ಪಕ್ಷದಲ್ಲಿ ಅಂತಹ ಜಾಬ್ ಸಂಖ್ಯೆಗಳನ್ನು ರದ್ದುಪಡಿಸಿದ ನಂತರವೇ ಡಿ.ಸಿ.ಬಿಲ್ಲಿನ ಮೂಲಕ ಪಾವತಿಗೆ ಬಿಲ್ಲು ಸಲ್ಲಿಸಲು ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳು ಕ್ರಮಕೈಗೊಳ್ಳುವುದು. ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡಂತೆ ಉದಾಹರಣೆ ನೀಡಲಾಗಿದೆ.

ಉದಾ: (ಪಿ–0190 ಪೂಜ್ಯ ಮಹಾಪೌರರ ವಿವೇಚನಾ ಅನುದಾನ, ಪಿ–2178 ಉಪ ಮಹಾಪೌರರ ವಿವೇಚನಾ ಅನುದಾನ, ಪಿ–3075 ಬೆಂಗಳೂರು ನಗರ ಉಸ್ತುವಾರಿ ಸಚಿವರ ವಿವೇಚನೆಗೆ ಒಳಪಟ್ಟ ಅನುದಾನದಡಿಯಲ್ಲಿ ಭದ್ರತಾ ಸೇವೆ ಕಾಮಗಾರಿಗಳು, ಸಿ.ಸಿ. ಕ್ಯಾಮರಾ ಅಳವಡಿಸುವುದು, ಒಂಟಿಮನೆ ನಿರ್ಮಾಣ, ಉದ್ಯಾನವನಗಳ ಅಭಿವೃದ್ಧಿ ಕಾಮಗಾರಿಗಳು ಮತ್ತು ಇತರೆ ಕಾರ್ಯಕ್ರಮಗಳಿಗೆ ಜಾಬ್ ಸಂಖ್ಯೆ ಪಡೆದು ನಿರ್ವಹಿಸಿರುವ ಕಾಮಗಾರಿಗಳನ್ನು ಮೂಲ ಅಭಿವೃದ್ಧಿ ಕಾಮಗಾರಿಗಳ ಲೆಕ್ಕಶೀರ್ಷಿಕೆ ಅಡಿಯಲ್ಲಿ ಡಿ.ಸಿ.ಬಿಲ್ಲು ಸಲ್ಲಿಸಲು ಅವಕಾಶವಿರುವುದಿಲ್ಲ ಅಂತಹ ಪ್ರಕರಣಗಳಲ್ಲಿ ಆಯಾ ಕಾರ್ಯಕ್ರಮಗಳಿಗೆ ಮೀಸಲಿಟ್ಟ ಅಂದರೆ ಒಂಟಿಮನೆ ಕಾಮಗಾರಿಗಳನ್ನು ಒಂಟಿಮನೆಗೆ ಮೀಸಲಿಟ್ಟ ಅನುದಾನದಲ್ಲಿ, ಭದ್ರತಾ ಸೇವೆಗಳಿಗೆ ಮೀಸಲಿಟ್ಟ ಅನುದಾನದಲ್ಲಿ ಭದ್ರತಾ ಸೇವೆಗಳ ಬಿಲ್ಲುಗಳನ್ನು ಸಲ್ಲಿಸಲು ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳು ಕ್ರಮಕೈಗೊಳ್ಳುವುದು).

**ವಲಯವಾರು ಅನುದಾನ ಹಂಚಿಕೆ, ಮರುಹಂಚಿಕೆ ಮತ್ತು ಮರು ಹೊಂದಾಣಿಕೆ.**

1. **ಕೇಂದ್ರ/ವಲಯವಾರು ಅನುದಾನ ಹಂಚಿಕೆ :**

ಅಪರ ಆಯುಕ್ತರು (ಹಣಕಾಸು)ರವರು ಆಯವ್ಯಯ ಕೌನ್ಸಿಲ್ ಸಭೆಯ ಅನುಮೋದನೆಯಾದ ನಂತರ ಸರ್ಕಾರದ ಅನುಮೋದನೆ ನಿರೀಕ್ಷಿಸಿ ಸಿಬ್ಬಂದಿ ವೆಚ್ಚಗಳು, ಆಡಳಿತಾತ್ಮಕ ವೆಚ್ಚಗಳು, ಕಾರ್ಯಕ್ರಮಗಳು ಮತ್ತು ತುರ್ತು ನಿರ್ವಹಣೆಯ ಲೆಕ್ಕಶೀರ್ಷಿಕೆ ಅಡಿಯಲ್ಲಿ ಮೀಸಲಿಟ್ಟ ಅನುದಾನವನ್ನು ವಲಯವಾರು ಹಂಚಿಕೆ ಮಾಡಲು ವಿಶೇಷ ಆಯುಕ್ತರು (ಹಣಕಾಸು) ರವರ ಮೂಲಕ ಮುಖ್ಯ ಆಯುಕ್ತರ ಅನುಮೋದನೆ ಪಡೆದು ವಲಯವಾರು ಹಂಚಿಕೆ ಮಾಡಲು ಕ್ರಮವಹಿಸುವುದು ಮತ್ತು ಐ.ಎಫ್.ಎಂ.ಎಸ್. ತಂತ್ರಾಂಶದಲ್ಲಿ ಅನುದಾನ ಹಂಚಿಕೆಯ ವಿವರಗಳನ್ನು ಕೇಂದ್ರ/ವಲಯವಾರು ದಾಖಲಿಸುವುದು.

ಆಯವ್ಯಯವು ಸರ್ಕಾರದ ಅನುಮೋದನೆಯಾದ ನಂತರ ಮೀಸಲಿನಲ್ಲಿರಿಸಿದ ಅನುದಾನ, ಪ್ರಗತಿಯಲ್ಲಿರುವ ಕಾಮಗಾರಿಗಳಿಗೆ ಮೀಸಲಿರಿಸಿದ ಅನುದಾನ ಮತ್ತು ಬಾಕಿ ಬಿಲ್ಲುಗಳ ಕಾಮಗಾರಿಗಳಿಗೆ ಮೀಸಲಿರಿಸಿದ ಅನುದಾನವನ್ನು ಕೇಂದ್ರ/ವಲಯವಾರು ಹಂಚಿಕೆ ಮಾಡಲು ಹಾಗೂ ವಲಯವಾರು ಹಂಚಿಕೆ ಮಾಡಿದ ಅನುದಾನವನ್ನು ಅಗತ್ಯತೆಗೆ ಅನುಗುಣವಾಗಿ ಮರುಹಂಚಿಕೆ ಮಾಡಲು ವಿಶೇಷ ಆಯುಕ್ತರು (ಹಣಕಾಸು) ರವರ ಮೂಲಕ ಮುಖ್ಯ ಆಯುಕ್ತರ ಅನುಮೋದನೆ ಪಡೆದು, ಅನುಮೋದನೆಯಂತೆ ಐ.ಎಫ್.ಎಂ.ಎಸ್. ತಂತ್ರಾಂಶದಲ್ಲಿ ದಾಖಲಿಸಿ ಮರುಹಂಚಿಕೆ ಮಾಡಿ ವೆಚ್ಚ ನಿಯಂತ್ರಿಸಲು ಅಪರ ಆಯುಕ್ತರು (ಹಣಕಾಸು)ರವರು ಕ್ರಮವಹಿಸುವುದು.

ಮು.ತಿ.ನೋ.

**2. ಕೇಂದ್ರ/ವಲಯವಾರು ಹಂಚಿಕೆ ಮಾಡಿರುವ ಅನುದಾನವನ್ನು ಬಟವಾಡೆ ಅಧಿಕಾರಿಗಳಿಗೆ ಹಂಚಿಕೆ :**

ಆಯವ್ಯಯದಲ್ಲಿ ವಿವಿಧ ಲೆಕ್ಕಶೀರ್ಷಿಕೆಗಳಡಿಯಲ್ಲಿ ಮೀಸಲಿರಿಸಿದ ಅನುದಾನವನ್ನು ಇಲಾಖಾವಾರು ವಲಯವಾರು ಹಂಚಿಕೆ ಮಾಡಿದ ನಂತರ ಆಯಾ ಲೆಕ್ಕಶೀರ್ಷಿಕೆ ಅಡಿಯಲ್ಲಿ ವೆಚ್ಚ ಭರಿಸಲು ಕೇಂದ್ರ/ವಲಯ ಹಂತವಲ್ಲಿ ಇಲಾಖಾವಾರು ಬಟವಾಡೆ ಅಧಿಕಾರಿಗಳಿಗೆ ಅನುದಾನವನ್ನು ಮರುಹಂಚಿಕೆ ಮಾಡಿ. ತಂತ್ರಾಂಶದಲ್ಲಿ ಅಳವಡಿಸಬೇಕಾಗಿರುತ್ತದೆ. (ಉದಾಹರಣೆ : ವಲಯವಾರು ಹಂಚಿಕೆಯಲ್ಲಿ ದಕ್ಷಿಣ ವಲಯದ ಕಂದಾಯ ಇಲಾಖೆಗೆ 03–210302 ಪಾಲಿಕೆ ವಾಹನಗಳಿಗೆ ಇಂಧನ ವೆಚ್ಚಗಳು ಪಿ0357 ಅಡಿಯಲ್ಲಿ ಹಂಚಿಕೆಯಾಗಿರುವ ಅನುದಾನ ರೂ.100.00 ಲಕ್ಷಗಳನ್ನು ಕಂದಾಯ ಇಲಾಖೆಯಡಿ ಬರುವ ವಲಯದ ಎಲ್ಲಾ ಬಟವಾಡೆ ಅಧಿಕಾರಿಗಳಿಗೆ ಮರುಹಂಚಿಕೆ ಮಾಡಿ, ಐ.ಎಫ್.ಎಂ.ಎಸ್. ತಂತ್ರಾಂಶದಲ್ಲಿ ದಾಖಲಿಸಬೇಕಾಗಿರುತ್ತದೆ).

ಈ ಸಂಬಂಧ ಕೇಂದ್ರ/ವಲಯ ಉಪ ನಿಯಂತ್ರಕರು (ಹಣಕಾಸು) ರವರು ಇಲಾಖಾವಾರು ಹಂಚಿಕೆಯಾಗಿರುವ ಅನುದಾನಕ್ಕೆ ಅನುಗುಣವಾಗಿ ಮರುಹಂಚಿಕೆ ಮಾಡಲು ತಮ್ಮ ವ್ಯಾಪ್ತಿಯ ಇಲಾಖಾವಾರು ಎಲ್ಲಾ ಬಟವಾಡೆ ಅಧಿಕಾರಿಗಳಿಂದ ಮಾಹಿತಿಯನ್ನು ಪಡೆದು, ಪರಿಶೀಲಿಸಿ, ಬಟವಾಡೆ ಅಧಿಕಾರಿಗಳವಾರು ಮರುಹಂಚಿಕೆ ಮಾಡುವ ಪ್ರಸ್ತಾವನೆಯನ್ನು ವಲಯ ಆಯುಕ್ತರಿಗೆ ಸಲ್ಲಿಸಿ (ಕೇಂದ್ರ ಕಛೇರಿಯಲ್ಲಿ ವಿಶೇಷ ಆಯುಕ್ತರು (ಹಣಕಾಸು) ರವರಿಗೆ) ವಲಯ ಆಯುಕ್ತರ ಅನುಮೋದನೆಯಂತೆ ಇಲಾಖಾವಾರು ಲೆಕ್ಕಶೀರ್ಷಿಕೆ ಅಡಿಯಲ್ಲಿ ಬಟವಾಡೆ ಅಧಿಕಾರಿಗಳಿಗೆ ಮರುಹಂಚಿಕೆ ಮಾಡಲು ಕ್ರಮವಹಿಸುವುದು ಹಾಗೂ ಐ.ಎಫ್.ಎಂ.ಎಸ್. ತಂತ್ರಾಂಶದಲ್ಲಿ ಅನುದಾನ ಮರುಹಂಚಿಕೆಯನ್ನು ಇಲಾಖಾವಾರು ಬಟವಾಡೆ ಅಧಿಕಾರಿವಾರು ದಾಖಲಿಸುವುದು.

**3. ಒಂದೇ ಲೇಕ್ಕಶೀರ್ಷಿಕೆಯಡಿಯಲ್ಲಿನ ಇಲಾಖಾವಾರು ಅನುದಾನದ ಮರು ಹಂಚಿಕೆ :**

ಆಯವ್ಯಯದಲ್ಲಿ ವೆಚ್ಚಗಳನ್ನು ನಿಯಂತ್ರಿಸಲು ಅನುವಾಗುವಂತೆ ಒಂದೇ ಲೇಕ್ಕಶೀರ್ಷಿಕೆಯಡಿಯಲ್ಲಿನ ಅನುದಾನವನ್ನು ಇಲಾಖಾವಾರು ಹಂಚಿಕೆ ಮಾಡಲಾಗಿದ್ದು, ಅಂದರೆ 210203 Printing, Stationery & Photocopying Charges ಗೆ ಅಗತ್ಯವಿರುವ ಅನುದಾನವನ್ನು ಇಲಾಖಾವಾರು ಇಲಾಖಾ ಸಂಕೇತ ಸಂಯೋಜನೆಯೊಂದಿಗೆ ಎಲ್ಲಾ ಇಲಾಖೆಗಳಲ್ಲಿ ಒದಗಿಸಲಾಗಿದ್ದು, (ಉದಾ: ಕೌನ್ಸಿಲ್ ಇಲಾಖೆಯಲ್ಲಿ 01–210203 ಎಂದು, ಸಾಮಾನ್ಯ ಆಡಳಿತ ಇಲಾಖೆಯಲ್ಲಿ 02–210203 ಎಂದು ಸಂಕೇತ ನೀಡಿ, ಅನುದಾನವನ್ನು ಒದಗಿಸಲಾಗಿರುತ್ತದೆ.) ಇಂತಹ ಪ್ರಕರಣಗಳಲ್ಲಿ ಮರುಹಂಚಿಕೆ ಮಾಡಬೇಕಾದ ಸಂದರ್ಭಗಳಲ್ಲಿ ವಿಶೇಷ ಆಯುಕ್ತರು (ಹಣಕಾಸು) ರವರ ಅನುಮೋದನೆ ಪಡೆದು ಅಪರ ಆಯುಕ್ತರು (ಹಣಕಾಸು) ರವರು ಐ.ಎಫ್.ಎಂ.ಎಸ್. ತಂತ್ರಾಂಶದಲ್ಲಿ ಅನುದಾನ ಮರುಹಂಚಿಕೆ ಮಾಡಿ ದಾಖಲಿಸಲು ಕ್ರಮವಹಿಸುವುದು.

**4. ಒಂದು ಆಯವ್ಯಯ ಲೆಕ್ಕಶೀರ್ಷಿಕೆಯಿಂದ ಇನ್ನೊಂದು ಆಯವ್ಯಯ ಲೆಕ್ಕಶೀರ್ಷಿಕೆ ಅನುದಾನ ಮರುಹಂಚಿಕೆ :**

ಆಯವ್ಯಯದಲ್ಲಿ ಮೀಸಲಿರಿಸಿದ ಒಂದು ಆಯವ್ಯಯ ಲೆಕ್ಕಶೀರ್ಷಿಕೆಯಡಿಯಲ್ಲಿನ ಅನುದಾನವನ್ನು ಇನ್ನೊಂದು ಆಯವ್ಯಯ ಲೆಕ್ಕಶೀರ್ಷಿಕೆ ವರ್ಗಾವಣೆ ಮಾಡಿಕೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ಅಗತ್ಯವಾಗಿರುತ್ತದೆ.

ಪು.ತಿ.ನೋ.

ಇಂತಹ ಪ್ರಕರಣಗಳಲ್ಲಿ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು ಸಮುಚಿತ ಮಾರ್ಗಮುಖೇನ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಯನ್ನು ಪಡೆದು ಕಡತವನ್ನು ಅಪರ ಆಯುಕ್ತರು (ಹಣಕಾಸು) ರವರಿಗೆ ಸಲ್ಲಿಸುವುದು. ಅಪರ ಆಯುಕ್ತರು (ಹಣಕಾಸು)ರವರು ವಿಶೇಷ ಆಯುಕ್ತರು (ಹಣಕಾಸು)ರವರ ಅನುಮೋದನೆಯೊಂದಿಗೆ ಐ.ಎಫ್.ಎಂ.ಎಸ್. ತಂತ್ರಾಂಶದಲ್ಲಿ ಅನುದಾನವನ್ನು ಮರುಹಂಚಿಕೆ ಮಾಡಿ ದಾಖಲಿಸಲು ಕ್ರಮವಹಿಸುವುದು.

**ಪಾಲಿಕೆಯ 2021–22ನೇ ಸಾಲಿನ ಆಯವ್ಯಯದ ಅನುದಾನವನ್ನು ವಲಯಗಳಿಗೆ ಹಂಚಿಕೆ ಮಾಡಿರುವ ವಿವರಗಳು :**

ಪಾಲಿಕೆಯ 2021–22ನೇ ಸಾಲಿನ ಆಯವ್ಯಯಕ್ಕೆ ಘನ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಿ, ಸಿಬ್ಬಂದಿ ವೆಚ್ಚಗಳು, ಆಡಳಿತಾತ್ಮಕ ವೆಚ್ಚಗಳು, ಕಾರ್ಯಕ್ರಮಗಳು ಮತ್ತು ತುರ್ತು ನಿರ್ವಹಣೆಯ ಲೆಕ್ಕಶೀರ್ಷಿಕೆ ಅಡಿಯಲ್ಲಿ ಮೀಸಲಿಟ್ಟ ಅನುದಾನವನ್ನು **ಕೇಂದ್ರ, ಪೂರ್ವ, ಪಶ್ಚಿಮ, ದಕ್ಷಿಣ, ದಾಸರಹಳ್ಳಿ ಯಲಹಂಕ, ಮಹದೇವಪುರ, ಬೊಮ್ಮನಹಳ್ಳಿ, ರಾಜರಾಜೇಶ್ವರಿನಗರ ವಲಯಗಳಿಗೆ** ಇಲಾಖಾವಾರು, ಪ್ರತಿ ಶೀರ್ಷಿಕೆವಾರು, ಎಲ್ಲಾ ವಲಯಗಳಿಗೆ ಹಂಚಿಕೆ ಮಾಡಿ ಐ.ಎಫ್.ಎಂ.ಎಸ್. ತಂತ್ರಾಂಶದಲ್ಲಿ ಅಳವಡಿಸಲಾಗಿದೆ.

ವಲಯಗಳಿಗೆ ಅನುದಾನ ಹಂಚಿಕೆ ಮಾಡಲು ಪ್ರಸ್ತುತ ವಲಯಗಳಲ್ಲಿರುವ ವಾರ್ಡ್‌ಗಳ ಆಧಾರದ ಮೇರೆಗೆ ಅಂದರೆ ಹಾಲಿ ಇರುವ ವಲಯಗಳಲ್ಲಿನ ವಾರ್ಡ್‌ಗಳ ಸಂಖ್ಯೆಗಳು : ಪೂರ್ವ–44, ಪಶ್ಚಿಮ–44 ಮತ್ತು ದಕ್ಷಿಣ–44, ಯಲಹಂಕ – 11, ಮಹದೇವಪುರ –17, ಬೊಮ್ಮನಹಳ್ಳಿ – 16 ರಾಜರಾಜೇಶ್ವರಿನಗರ ವಲಯ – 14 ಮತ್ತು ದಾಸರಹಳ್ಳಿ – 8 ವಾರ್ಡ್‌ಗಳ ಆಧಾರದ ಮೇಲೆ ಅನುದಾನವನ್ನು ಹಂಚಿಕೆ ಮಾಡಲಾಗಿರುತ್ತದೆ.

ಆಡಳಿತಾತ್ಮಕ ಮತ್ತು ಆರ್ಥಿಕ ಅಧಿಕಾರ ವಿಕೇಂದ್ರೀಕರಣದ ಅಂಗವಾಗಿ 2021–22ನೇ ಸಾಲಿನಿಂದ ಆಯವ್ಯಯದಲ್ಲಿ ಮೀಸಲಿರಿಸಿರುವ ಅನುದಾನವನ್ನು ವಲಯವಾರು ಹಂಚಿಕೆ ಮಾಡಿದ್ದು, ವಲಯಗಳಲ್ಲಿ ಆಡಳಿತವು ಸುಗಮವಾಗಿ ನಡೆಸಲು ಅಧಿಕಾರ ಪ್ರತ್ಯಾಯೋಜನೆಯಂತೆ ಎಲ್ಲಾ ರೀತಿಯ ಆಡಳಿತಾತ್ಮಕ ನಿರ್ಧಾರಗಳನ್ನು ವಲಯ ಮಟ್ಟದಲ್ಲಿಯೇ ವಲಯ ಆಯುಕ್ತರು ಕೈಗೊಳ್ಳತಕ್ಕದ್ದು, ವಲಯ ವ್ಯಾಪ್ತಿಯಲ್ಲಿ ವೆಚ್ಚವನ್ನು ಭರಿಸುವ ಬಟವಾಡೆ ಅಧಿಕಾರಿಗಳು ನಿಯಮಾನುಸಾರ ಸಕ್ಷಮ ಪ್ರಾಧಿಕಾರದ ಆಡಳಿತಾತ್ಮಕ ಅನುಮೋದನೆ ಪಡೆದು ವೆಚ್ಚವನ್ನು ಭರಿಸುವುದು.

**ವಲಯವಾರು ಅನುದಾನ ಹಂಚಿಕೆ ವಿವರ :**

1. ಕೌನ್ಸಿಲ್ ಇಲಾಖೆಯ ಲೆಕ್ಕಶೀರ್ಷಿಕೆ ಅಡಿಯಲ್ಲಿ ಒದಗಿಸಿರುವ ಅನುದಾನವನ್ನು ಕೇಂದ್ರಕ್ಕೆ ಹಂಚಿಕೆ ಮಾಡಲಾಗಿದೆ.
2. ಸಾಮಾನ್ಯ ಆಡಳಿತ ಇಲಾಖೆಯ ಲೆಕ್ಕಶೀರ್ಷಿಕೆ ಅಡಿಯಲ್ಲಿ ಒದಗಿಸಿರುವ ಅನುದಾನವನ್ನು ಕೇಂದ್ರ ಮತ್ತು ವಲಯಗಳಿಗೆ ಹಂಚಿಕೆ ಮಾಡಲಾಗಿದೆ.
3. ನಿವೃತ್ತಿ ವೇತನ, ಪಿಂಚಣಿ, ಬ್ಯಾಂಕ್ ಸಾಲ ಮರುಪಾವತಿ ಅಡಿ ಒದಗಿಸಿರುವ ಅನುದಾನದ ಲೆಕ್ಕಶೀರ್ಷಿಕೆಗಳನ್ನು ಕೇಂದ್ರಕ್ಕೆ ಹಂಚಿಕೆ ಮಾಡಲಾಗಿದೆ.
4. ಕಂದಾಯ ಮತ್ತು ನಗರ ಯೋಜನೆ ಮತ್ತು ನಿಯಂತ್ರಣ ಇಲಾಖೆಗಳ ಲೆಕ್ಕಶೀರ್ಷಿಕೆ ಅಡಿಯಲ್ಲಿ ಒದಗಿಸಿರುವ ಅನುದಾನವನ್ನು ವಲಯಗಳಿಗೆ ಹಂಚಿಕೆ ಮಾಡಲಾಗಿದೆ.

ಪು.ತಿ.ನೋ.

5. ಕಂದಾಯ ಮತ್ತು ನಗರ ಯೋಜನೆ ಮತ್ತು ನಿಯಂತ್ರಣ ಇಲಾಖೆಗಳಡಿಯಲ್ಲಿನ ಲೆಕ್ಕಶೀರ್ಷಿಕೆ ಅಡಿಯಲ್ಲಿ ಒದಗಿಸಿರುವ ಕರಗಳು ಮತ್ತು ಸರ್ಚಾರ್ಜ್‌ಗಳ ಮರುಪಾವತಿಯನ್ನು ಪ್ರಸ್ತುತ ಮೀಸಲಿನಲ್ಲಿ ಇಡಲಾಗಿದ್ದು, ಪಾವತಿ ಆಧಾರದ ಮೇಲೆ ಕೇಂದ್ರಕ್ಕೆ ಹಂಚಿಕೆ ಮಾಡಲಾಗುವುದು.
6. ಸಾರ್ವಜನಿಕ ಕಾಮಗಾರಿಗಳು ಇಲಾಖೆಯ ಲೆಕ್ಕಶೀರ್ಷಿಕೆ ಅಡಿಯಲ್ಲಿ ಒದಗಿಸಿರುವ ಅನುದಾನವನ್ನು ಕೇಂದ್ರ/ವಲಯಗಳಿಗೆ ಈ ಕೆಳಕಂಡಂತೆ ಹಂಚಿಕೆ ಮಾಡಲಾಗಿದೆ.

   - ವಿವಿಧ ಲೆಕ್ಕಶೀರ್ಷಿಕೆ ಅಡಿಯಲ್ಲಿ ಬಾಕಿ ಬಿಲ್ಲುಗಳ ಕಾಮಗಾರಿಗಳು, ಪ್ರಗತಿಯಲ್ಲಿರುವ ಕಾಮಗಾರಿಗಳು ಮತ್ತು ನೂತನ ಕಾಮಗಾರಿಗಳಿಗೆ ಮೀಸಲಿರಿಸಿದ ಅನುದಾನವನ್ನು ವಲಯಗಳಿಗೆ ಹಂಚಿಕೆ ಮಾಡಿರುವುದಿಲ್ಲ. ಸದರಿ ಮೊತ್ತವನ್ನು ಹಂತ ಹಂತವಾಗಿ ವಲಯಗಳಿಗೆ ಅಗತ್ಯಗಳಿಗನುಸಾರ ಮುಖ್ಯ ಆಯುಕ್ತರ ಆದೇಶದನುಸಾರ ಹಂಚಿಕೆ ಮಾಡಲು ಕ್ರಮವಹಿಸಲಾಗುವುದು.

   - ಬೀದಿ ದೀಪ ವಿದ್ಯುತ್ ಶುಲ್ಕವನ್ನು (ಎಸ್.ಎಫ್.ಸಿ.ಅನುದಾನ) ರೂ.257.00 ಕೋಟಿಗಳನ್ನು ಕೇಂದ್ರಕ್ಕೆ ಹಂಚಿಕೆ ಮಾಡಲಾಗಿದೆ.

   - ಸಾರ್ವಜನಿಕ ಕಾಮಗಾರಿಗಳು ಶೀರ್ಷಿಕೆ ಅಡಿಯಲ್ಲಿ ಆಯವ್ಯಯ ಲೆಕ್ಕಶೀರ್ಷಿಕೆ [05–400101] ಪಿ–0001 ಭೂ ಸ್ವಾದೀನ ಪರಿಹಾರ ರೂ.80.00 ಕೋಟಿ ಅನುದಾನವನ್ನು ಕೇಂದ್ರ ಕಛೇರಿಯಲ್ಲಿರುವ ಆಸ್ತಿಗಳ ವಿಭಾಗದಿಂದ ವಲಯವಾರು ಅನುಷ್ಠಾನಗೊಳಿಸುತ್ತಿರುವುದರಿಂದ ಕೇಂದ್ರಕ್ಕೆ ರೂ.40.00 ಕೋಟಿ ಹಂಚಿಕೆ ಮಾಡಲಾಗಿದ್ದು, ಬಾಕಿ ರೂ.40.00 ಕೋಟಿ ಮೀಸಲಿನಲ್ಲಿ ಉಳಿಸಿಕೊಳ್ಳಲಾಗಿದೆ.

   - ಸಾರ್ವಜನಿಕ ಕಾಮಗಾರಿಗಳು ಶೀರ್ಷಿಕೆ ಅಡಿಯಲ್ಲಿ ಆಯವ್ಯಯ ಲೆಕ್ಕಶೀರ್ಷಿಕೆ [05–220503] ಪಿ.3240ರಲ್ಲಿ ವಿದ್ಯುತ್ ಚಿತಾಗಾರ ನಿರ್ವಹಣೆಗೆ ರೂ.20.00 ಲಕ್ಷ ಅನುದಾನ ಮೀಸಲಿರಿಸಿದ್ದು, ವಲಯವಾರು ಇರುವ 12 ವಿದ್ಯುತ್ ಚಿತಾಗಾರಗಳಿಗೆ ಹಂಚಿಕೆ ಮಾಡಲಾಗಿದೆ.

   - ಸಾರ್ವಜನಿಕ ಕಾಮಗಾರಿಗಳು ಶೀರ್ಷಿಕೆ ಅಡಿಯಲ್ಲಿ ಆಯವ್ಯಯ ಲೆಕ್ಕಶೀರ್ಷಿಕೆ [05–220699] ಪಿ.1771 ವಾರ್ಡ್ ವ್ಯಾಪ್ತಿಯಲ್ಲಿನ ಇತರೆ ನಿರ್ವಹಣೆಗೆ ರೂ.50.00 ಕೋಟಿಗಳಲ್ಲಿ ಪ್ರತಿವಾರ್ಡ್‌ಗೆ ರೂ.15.00 ಲಕ್ಷಗಳಂತೆ ಹೂಳೆತ್ತುವ ಕಾಮಗಾರಿಗಳನ್ನು ಕೈಗೊಳ್ಳಲು ವಲಯವಾರು ಹಂಚಿಕೆ ಮಾಡಲಾಗಿರುತ್ತದೆ.

   - 15ನೇ ಹಣಕಾಸು ಆಯೋಗದ ಅನುದಾನ ರೂ.421.00 ಕೋಟಿಗಳಿಗೆ ಆಯೋಗದ ಮಾರ್ಗಸೂಚಿ ಅನುಸಾರ ಕ್ರಿಯಾಯೋಜನೆ ಅನುಮೋದನೆಯಂತೆ ವಲಯಗಳಿಗೆ ಮರುಹಂಚಿಕೆ ಮಾಡಲಾಗುವುದು.

7. ಘನತ್ಯಾಜ್ಯ ನಿರ್ವಹಣೆ ಇಲಾಖೆಯ ಲೆಕ್ಕಶೀರ್ಷಿಕೆ ಅಡಿಯಲ್ಲಿ ಒದಗಿಸಿರುವ ಅನುದಾನವನ್ನು ಕೇಂದ್ರ/ವಲಯಗಳಿಗೆ ಹಂಚಿಕೆ ಮಾಡಲಾಗಿದೆ.
8. ಸಾರ್ವಜನಿಕ ಆರೋಗ್ಯ ಸಾಮಾನ್ಯ ಇಲಾಖೆಯ ಲೆಕ್ಕಶೀರ್ಷಿಕೆ ಅಡಿಯಲ್ಲಿ ಒದಗಿಸಿರುವ ಅನುದಾನವನ್ನು ಕೇಂದ್ರ/ವಲಯಗಳಿಗೆ ಹಂಚಿಕೆ ಮಾಡಲಾಗಿದೆ.

ಮು.ತಿ.ನೋ.

9. ಸಾರ್ವಜನಿಕ ಆರೋಗ್ಯ ವೈದ್ಯಕೀಯ ವಿಭಾಗದಲ್ಲಿ ವಿವಿಧ ಲೆಕ್ಕಶೀರ್ಷಿಕೆ ಅಡಿಯಲ್ಲಿ ಮೀಸಲಿರಿಸಿರುವ ಎಲ್ಲಾ ಅನುದಾನವನ್ನು ಹೊಸ ವಲಯಗಳಲ್ಲಿ ಆಸ್ಪತ್ರೆಗಳು ಇಲ್ಲದೇ ಇರುವುದರಿಂದ ಪೂರ್ವ, ಪಶ್ಚಿಮ ಮತ್ತು ದಕ್ಷಿಣ ವಲಯಗಳಿಗೆ ಮಾತ್ರ ಹಂಚಿಕೆ ಮಾಡಲಾಗಿದೆ.
10. ತೋಟಗಾರಿಕೆ ಇಲಾಖೆಯ ಲೆಕ್ಕಶೀರ್ಷಿಕೆ ಅಡಿಯಲ್ಲಿ ಒದಗಿಸಿರುವ ಅನುದಾನದಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಹೊರತುಪಡಿಸಿ, ಉಳಿದ ಲೆಕ್ಕಶೀರ್ಷಿಕೆಗಳ ಅನುದಾನವನ್ನು ವಲಯಗಳಿಗೆ ಹಂಚಿಕೆ ಮಾಡಲಾಗಿದೆ.
11. ನಗರ ಅರಣ್ಯೀಕರಣ ಇಲಾಖೆಯ ಲೆಕ್ಕಶೀರ್ಷಿಕೆ ಅಡಿಯಲ್ಲಿ ಒದಗಿಸಿರುವ ಅನುದಾನವನ್ನು ವಲಯಗಳಿಗೆ ಹಂಚಿಕೆ ಮಾಡಲಾಗಿದ್ದು, ಅರಣ್ಯ ಇಲಾಖೆಯ ವಲಯ ಹಂತದ ಅಧಿಕಾರಿಗಳು ವಲಯ ಹಂತದಲ್ಲಿಯೇ ಅನುದಾನ ವೆಚ್ಚ ಮಾಡಲು ಕ್ರಮ ಕೈಗೊಳ್ಳುವುದು.
12. ಸಾರ್ವಜನಿಕ ಶಿಕ್ಷಣ ವಿಭಾಗದ ವಲಯವಾರು ಕಛೇರಿಗಳು ಇಲ್ಲದೇ ಇರುವುದರಿಂದ ವಿವಿಧ ಲೆಕ್ಕಶೀರ್ಷಿಕೆ ಅಡಿಯಲ್ಲಿ ಮೀಸಲಿರಿಸಿರುವ ಎಲ್ಲಾ ಅನುದಾನವನ್ನು ಕೇಂದ್ರಕ್ಕೆ ಹಂಚಿಕೆ ಮಾಡಲಾಗಿದೆ.
13. ಸಮಾಜ ಕಲ್ಯಾಣ ಇಲಾಖೆಯ ಲೆಕ್ಕಶೀರ್ಷಿಕೆ ಅಡಿಯಲ್ಲಿ ಒದಗಿಸಿರುವ ಅನುದಾನವನ್ನು ವಲಯಗಳಿಗೆ ಹಂಚಿಕೆ ಮಾಡಲಾಗಿದೆ.
14. ಆಯವ್ಯಯ ಅನುದಾನವನ್ನು ವಲಯವಾರು ಹಂಚಿಕೆ ಮಾಡಿರುವ ವಿವರವಾದ ಪಟ್ಟಿಯನ್ನು ಪಾಲಿಕೆಯ ಅಂತರ್ಜಾಲದ Finance ವಿಭಾಗದಲ್ಲಿ ಅಳವಡಿಸಲು ಕ್ರಮವಹಿಸುವುದು.

2021–22ನೇ ಸಾಲಿನ ಆಯವ್ಯಯವನ್ನು ವಲಯವಾರು ಹಂಚಿಕೆ ಮಾಡಿರುವಂತೆ ಅನುದಾನದ ಮಿತಿಯಲ್ಲಿಯೇ ಅನುಷ್ಠಾನಗೊಳಿಸಲು ಸೂಚಿಸಿ, ಆದೇಶಿಸಿದೆ.

**ಮುಖ್ಯ ಆಯುಕ್ತರು**
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

**ಪ್ರತಿಯನ್ನು:**
1. ಮಾನ್ಯ ಆಡಳಿತಗಾರರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ವಿಶೇಷ ಆಯುಕ್ತರು (ಆಡಳಿತ) ರವರಿಗೆ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
3. ವಿಶೇಷ ಆಯುಕ್ತರು (ಹಣಕಾಸು) ರವರಿಗೆ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4. ವಿಶೇಷ ಆಯುಕ್ತರು (ಯೋಜನೆ) ರವರಿಗೆ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
5. ವಿಶೇಷ ಆಯುಕ್ತರು (ಘನತ್ಯಾಜ್ಯ ವಸ್ತು ನಿರ್ವಹಣೆ) ರವರಿಗೆ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
6. ವಿಶೇಷ ಆಯುಕ್ತರು (ಶಿಕ್ಷಣ) ರವರಿಗೆ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
7. ವಿಶೇಷ ಆಯುಕ್ತರು (ಕಲ್ಯಾಣ) ರವರಿಗೆ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
8. ವಿಶೇಷ ಆಯುಕ್ತರು (ಆರೋಗ್ಯ) ರವರಿಗೆ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
9. ವಿಶೇಷ ಆಯುಕ್ತರು (ಆಸ್ತಿಗಳು) ರವರಿಗೆ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
10. ವಲಯ ಆಯುಕ್ತರು, ಪೂರ್ವ, ಪಶ್ಚಿಮ, ದಕ್ಷಿಣ, ಯಲಹಂಕ, ಮಹದೇವಪುರ, ಬೊಮ್ಮನಹಳ್ಳಿ, ರಾಜರಾಜೇಶ್ವರಿನಗರ ಮತ್ತು ದಾಸರಹಳ್ಳಿ ವಲಯ ರವರಿಗೆ ಮುಂದಿನ ಕ್ರಮಕ್ಕಾಗಿ.

ಪು.ತಿ.ನೋ.

11. ಅಪರ/ಜಂಟಿ ಆಯುಕ್ತರು, ಪೂರ್ವ, ಪಶ್ಚಿಮ, ದಕ್ಷಿಣ, ಯಲಹಂಕ, ಮಹದೇವಪುರ, ಬೊಮ್ಮನಹಳ್ಳಿ, ರಾಜರಾಜೇಶ್ವರಿನಗರ ಮತ್ತು ದಾಸರಹಳ್ಳಿ ವಲಯ ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
12. ಅಪರ ಆಯುಕ್ತರು (ಹಣಕಾಸು) ರವರಿಗೆ ಕಳುಹಿಸಿದೆ.
13. ಪ್ರಧಾನ ಅಭಿಯಂತರರು ರವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
14. ಮುಖ್ಯ ಲೆಕ್ಕಾಧಿಕಾರಿಗಳು ರವರಿಗೆ ಮುಂದಿನ ಕ್ರಮಕ್ಕಾಗಿ.
15. ಮುಖ್ಯ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ, ಬೃಹತ್ ಮಳೆ ನೀರುಗಾಲುವೆ, ಘನತ್ಯಾಜ್ಯ ವಸ್ತು ನಿರ್ವಹಣೆ, ಯೋಜನೆ, ಕೆರೆಗಳು ರವರಿಗೆ ಕಳುಹಿಸಿದೆ.
16. ಮುಖ್ಯ ಅಭಿಯಂತರರು, ಪೂರ್ವ, ಪಶ್ಚಿಮ, ದಕ್ಷಿಣ, ಯಲಹಂಕ, ಮಹದೇವಪುರ, ಬೊಮ್ಮನಹಳ್ಳಿ, ರಾಜರಾಜೇಶ್ವರಿನಗರ ಮತ್ತು ದಾಸರಹಳ್ಳಿ ವಲಯ ರವರಿಗೆ ಮುಂದಿನ ಕ್ರಮಕ್ಕಾಗಿ.
17. ಅಧೀಕ್ಷಕ ಅಭಿಯಂತರರು, ವಿದ್ಯುತ್ ರವರಿಗೆ ಮಾಹಿತಿಗಾಗಿ.
18. ಉಪ ನಿಯಂತ್ರಕರು (ಹಣಕಾಸು) ಪೂರ್ವ, ಪಶ್ಚಿಮ, ದಕ್ಷಿಣ, ಯಲಹಂಕ, ಮಹದೇವಪುರ, ಬೊಮ್ಮನಹಳ್ಳಿ, ರಾಜರಾಜೇಶ್ವರಿನಗರ ಮತ್ತು ದಾಸರಹಳ್ಳಿ ವಲಯ ರವರಿಗೆ ಮಾಹಿತಿಗಾಗಿ.
19. ಎಲ್ಲಾ ಕಾರ್ಯಪಾಲಕ ಅಭಿಯಂತರರು ರವರಿಗೆ ಮುಂದಿನ ಕ್ರಮಕ್ಕಾಗಿ.
20. ಎಲ್ಲಾ ಬಟವಾಡೆ ಅಧಿಕಾರಿರವರಿಗೆ ಮುಂದಿನ ಸೂಕ್ತಕ್ರಮಕ್ಕಾಗಿ.
21. ಮಾಹಿತಿ ತಂತ್ರಜ್ಞಾನ ಸಲಹೆಗಾರರು ರವರಿಗೆ ಮಾಹಿತಿಗಾಗಿ ಮತ್ತು ಪಾಲಿಕೆಯ ಅಂತರ್ಜಾಲದಲ್ಲಿ ಅಳವಡಿಸಲು ಸೂಚಿಸಿದೆ.
22. ಕಛೇರಿ ಪ್ರತಿ.